ಏನೋ ಬರೆದಿದ್ದ ಮೋಹಿತ್. ಅದನ್ನು ಜಾಗರೂಕತೆಯಿಂದ ಓದಿದ ಕರಮಚಂದ ಒಂದು ಸಣ್ಣ ಉದ್ಗಾರ ತೆಗೆದ. ಮೇ ತಿಂಗಳ ಹತ್ತನೇ ತಾರೀಖಿನ ಪುಟದಲ್ಲಿ ಕೆಲವು ಮರಗಳ ರೇಖಾ ಚಿತ್ರಗಳನ್ನು ಬಿಡಿಸಿಟ್ಟಿದ್ದ. ಜೊತೆಗೆ 'ಬಾವಲಿಗಳು' ಎಂದಷ್ಟೇ ಬರೆದಿದ್ದ. ಆತನಿಗೆ ಬಾವಲಿಗಳ ಬಗ್ಗೆ ವಿಶೇಷ ಆಸಕ್ತಿಯಿರಬೇಕು ಎಂದು ನನಗನ್ನಿಸಿತು. ಕಪಾಟಿನಲ್ಲಿ ಬಾವಲಿಗಳ ಬಗ್ಗೆ ಅನೇಕ ಪುಸ್ತಕಗಳಿದ್ದವು.

"ನಾವೀಗ ಮನೆಯ ಹೊರಗಡೆಗೆ ನಮ್ಮ ತನಿಖೆಯನ್ನು ವಿಸ್ತರಿಸುವ."

ನಾವು ಅಲ್ಲಿಂದ ಹೊರಬಿದ್ದೆವು. ಮನೆಯ ಸುತ್ತಲೂ ಬಗೆ ಬಗೆಯ ಹೂಗಳ ತೋಟವಿತ್ತು. ಇಂಟರ್‌ಲಾಕ್ ಅಳವಡಿಸಿದ ಅಂಗಳ. ಕರಮಚಂದ ಉತ್ಸುಕತೆಯಿಂದ ಸುತ್ತು ಹೊಡೆದವನು, ತುಸು ನಿರಾಶನಾಗಿ ಹಿಂದಿರುಗಿದ. ಆತ ಏನನ್ನೋ ನಿರೀಕ್ಷೆ ಮಾಡುತ್ತಿದ್ದಂತ್ತಿತ್ತು. ಮನೆಯ ಎಡಪಕ್ಕದಲ್ಲಿ ಚಿಕ್ಕ ಗೇಟು. ಗೇಟು ದಾಟಿದೊಡನೆ, ಅನತಿ ದೂರದಲ್ಲಿ ಭೂಮಿ ಪಕ್ಕನೆ ತುಂಡಾದಂತೆ, ಆಳವಾದ ಪ್ರಪಾತ ಭಯಾನಕವಾಗಿ ತೋರುತ್ತಿತ್ತು. ಪಾಗಾರಕ್ಕೆ ತಾಗಿಕೊಂಡಂತೆ ಮಣ್ಣಿನ ಕಾಲು ಹಾದಿ ದಕ್ಷಿಣ ದಿಕ್ಕಿಗೆ ಸಾಗಿತ್ತು. ಕರಮಚಂದ ಬೆನ್ನು ಬಾಗಿಸಿ, ಭೂತಗನ್ನಡಿ ಹಿಡಿದು, ನೆಲವನ್ನು ಬಗೆಯುವಂತೆ ಪರಿಶೀಲಿಸುತ್ತಾ ಮೆಲ್ಲನೆ ಹೆಜ್ಜೆ ಹೂಡಿದ. ನಾವು ಮೂವರು ಕುತೂಹಲದಿಂದ ಆತನ ಕ್ರಿಯೆಯನ್ನೇ ಗಮನಿಸುತ್ತಿದ್ದೆವು. ಆ ಕಾಲು ಹಾದಿ ಮುಂದಕ್ಕೆ ಸಾಗಿ, ಕೊಂಚ ದೂರದಲ್ಲಿ, ದಟ್ಟವಾದ ಮರಗಳ ಸಮುದಾಯದ ಸನಿಹ ಅಂತ್ಯವಾಗುತ್ತಿತ್ತು.

"ಪ್ರಸಾದ್, ಹಾಂ... ಇಲ್ಲಿ ನೋಡು, ಹೆಜ್ಜೆಗಳ ಗುರುತುಗಳು..."

ಕರಮಚಂದ ಏಕಾಏಕಿ ಪಿಸುಗುಟ್ಟಿದ. ನಾನೂ ದೇಹ ಬಗ್ಗಿಸಿ, ದಿಟ್ಟಿ ಹರಿಸಿದೆ. ಮಣ್ಣಿನ ನೆಲದಲ್ಲಿ ಅನೇಕ ಹೆಜ್ಜೆ ಗುರುತುಗಳು ಮೂಡಿದ್ದವು.

"ಇಲ್ಲಿ ಯಾರೋ ಹೊಡೆದಾಡಿಕೊಂಡಂತಿದೆ... ಇಲ್ಲಿ ನೋಡಿಲ್ಲಿ, ಊರುಗೋಲಿನ ಗುರುತುಗಳು... ಕ್ರಚಸ್‌ನ ಚಿಹ್ನೆ! ಯಾರೋ ಬಲಗಾಲು ಸರಿಯಿಲ್ಲದ ಆಸಾಮಿ... ಇಲ್ಲಿ... ಇನ್ನೊಂದು ಗುರುತಿದೆ... ಮೂರು ಜನ ಇದ್ದ ಹಾಗಿದೆ..."

ಕರಮಚಂದ ಉದ್ಗರಿಸಿದ.

"ಒಂಟಿ ಕಾಲಿನವನು!... ಅವ್ನು ಸುಮಾರು ಆರು ತಿಂಗಳ ಹಿಂದೆ ಒಮ್ಮೆ ಬಂದಿದ್ದ, ನಮ್ ಮೇಡಂ ಜೊತೆಯಲ್ಲಿ. ಅವರಿಬ್ಬರೂ ಸಾಹೇಬರ ಕೋಣೆಯಲ್ಲಿ ಬಹಳ ಹೊತ್ತಿನವರೆಗೆ ಇದ್ರು. ಇದನ್ನ ಸಾಹೇಬ್ರಿಗೆ ಹೇಳ್ಬೇಡ ಅಂತ ನನ್ಗೆ ಧಮ್ಕಿ ಹಾಕಿದ್ರು..."

ಚಿಕ್ಕನಂಜಪ್ಪ ದನಿ ತಗ್ಗಿಸಿ ಉಸುರಿದ.

ನನ್ನ ಮಿತ್ರ ನೆಲವನ್ನು ಪರೀಕ್ಷಿಸುವ ಕೆಲಸ ಮುಂದುವರೆಸಿದ. ಮಧ್ಯೆ ಮಧ್ಯೆ ತನ್ನಷ್ಟಕ್ಕೇ ಏನನ್ನೋ ಗೊಣಗುಟ್ಟುತ್ತಿದ್ದ.

"ಓಹ್... ಇದೇನಿದು! ಪ್ರಾಣಿಯ ಹೆಜ್ಜೆ ಗುರುತು... ಸರೀಸೃಪದಂತಿದೆ... ಇಲ್ನೋಡು, ಬೆರಳ ಗುರುತುಗಳು... ಹೊಟ್ಟೆಯೆಳೆದು ಹರಿಯುವ ಪ್ರಾಣಿ... ಚೂಪಾದ ವಸ್ತುವಿನಿಂದ ನೆಲವನ್ನು ಚುಚ್ಚಿದ ಚಿಹ್ನೆಗಳು... ಇಲ್ಲೆಲ್ಲಾ ರಕ್ತ ಚೆಲ್ಲಿದೆ! ಹಾಂ... ಇಲ್ಲಿ ಚಕ್ರಗಳ ಅಚ್ಚು... ಯಾವುದೋ ಭಾರವಾದ ವಾಹನ... ಟ್ರಾಕ್ಟರ್ ಅಥವಾ ಆ ರೀತಿಯದ್ದು..."

ಪ್ರಯೋಗದಲ್ಲಿ ನಿರತನಾದ ವಿಜ್ಞಾನಿಯಲ್ಲಿರುವ ಏಕಾಗ್ರತೆ ಕರಮಚಂದನಲ್ಲಿತ್ತು. ಅವನು ಹೇಳಿದ್ದೆಲ್ಲಾ ನಿಜವಾಗಿತ್ತು. ಒಂದಷ್ಟು ನೆತ್ತರು ಚೆಲ್ಲಿ ಮಣ್ಣಿನಲ್ಲಿ ಬೆರೆತು ಹೋಗಿತ್ತು. ಅಲ್ಲೇ